ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ

ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ: ಸಿ4(2)ಪ್ರೌ.ಶಾ.ಸ.ಶಿ.ಜೇ.ಪಟ್ಟಿ 01/2021-22 ದಿನಾಂಕ: 15-06-2022

-:ಅಧಿಸೂಚನೆ:-

ವಿಷಯ:ದಿನಾಂಕ: 01.01.2021 ರಲ್ಲಿದ್ದಂತೆ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಶಿಕ್ಷಕರು ಗ್ರೇಡ್-2 ಅಂತಿಮ ಜೇಷ್ಠತಾ ಪಟ್ಟಿಯನ್ನು ಹಿಂಪಡೆಯುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಪತ್ರ ಸಂಖ್ಯೆ ಇಪಿ 108 ಎಲ್‌ಬಿಪಿ2022 ಬೆಂಗಳೂರು ದಿನಾಂಕ: 13.06.2022

2. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 07.04.2022

3. ಸಹ ನಿರ್ದೇಶಕರು-1 ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ವಿಭಾಗ, ಬೆಂಗಳೂರು ರವರ ಪ.ಸಂ.ಸನಿ1/ಅ1/ಜೇಷ್ಠತಾ ಪಟ್ಟಿ-1/2021-22 ದಿನಾಂಕ:01.06.2022.

4. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು.ಪ.ಪ್ರೌ.ಶಿ.ಪ. ಮಂಡಳಿ, ಸಾ.ಶಿ.ಇಲಾಖೆ ಮೈಸೂರು ವಿಭಾಗ, ಮೈಸೂರು ರವರ ಪ.ಸಂ.ಜಿ12: ಸ.ಪ್ರೌ.ಶಿ.ಜೇ.ಪಟ್ಟಿ 13/2021-22 ದಿನಾಂಕ: 30.05.2022.

&&&&

ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:01.01.2021 ರಲ್ಲಿದ್ದಂತೆ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಶಿಕ್ಷಕರು ಗ್ರೇಡ್-2 ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳನ್ನು ಪಡೆದು ಬೆಂಗಳೂರು ಮತ್ತು ಮೈಸೂರು ವಿಭಾಗದ ಸಹ ನಿರ್ದೇಶಕರು ಧೃಢೀಕರಿಸಿ ನೀಡಿರುವ ಮಾಹಿತಿಯ ಆಧಾರದ ಮೇಲೆ ಉಲ್ಲೇಖ(2)ರಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಇಲಾಖಾ ವೆಬ್-ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಉಲ್ಲೇಖ(2)ರಲ್ಲಿ ಪ್ರಕಟಿಸಲಾಗಿರುವ ಅಂತಿಮ ಜೇಷ್ಠತಾ ಪಟ್ಟಿಗೆ ಉಲ್ಲೇಖ(3) ಮತ್ತು (4) ರಲ್ಲಿ ಸದರಿ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ನ್ಯೂನ್ಯತೆಗಳಿದ್ದು ಪರಿಷ್ಕರಿಸಿ ಪ್ರಕಟಿಸುವಂತೆ ಕೋರಿಕೆ ಸಲ್ಲಿಸಿರುವುದರಿಂದ ಉಲ್ಲೇಖ(1)ರ ಸರ್ಕಾರದ ನಿರ್ದೇಶನದಂತೆ ಉಲ್ಲೇಖ(2)ರಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯನ್ನು ಹಿಂಪಡೆಯಲಾಗಿದೆ.

ಮುಂದುವರೆದು ದಿನಾಂಕ: 01.01.2021 ರಲ್ಲಿದ್ದಂತೆ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಶಿಕ್ಷಕರು ಗ್ರೇಡ್-2 ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇಲಾಖೆ ವೆಬ್-ಸೈಟ್ ನಲ್ಲಿ ಪ್ರಕಟಿಸಲಾಗುವುದು.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ನಿರ್ದೇಶಕರು(ಪ್ರೌಢ ಶಿಕ್ಷಣ)

ಗೆ,

1) ಸಹ ನಿರ್ದೇಶಕರು-1 ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ವಿಭಾಗ, ಬೆಂಗಳೂರು
2) ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು. ಪ.ಪ್ರೌ.ಶಿ.ಪ.ಮಂಡಳಿ, ಸಾ.ಶಿ.ಇಲಾಖೆ ಮೈಸೂರು ವಿಭಾಗ, ಮೈಸೂರು.
3) ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ ಬೆಂಗಳೂರು ರವರಿಗೆ ರವಾನಿಸುತ್ತಾ ಇಲಾಖಾ ವೆಬ್-ಸೈಟ್ ನಲ್ಲಿ ಪ್ರಕಟಣೆಗಾಗಿ.
4) ಕಛೇರಿ ಪ್ರತಿ.